ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 224(212)
ಸದಸ್ಯರ ಹೆಸರು : ಶ್ರೀ ಪ್ರಕಾಶ್ ಕೆ ರಾಠೋಡ್ (ನಾಮನಿರ್ದೇಶನ ಹೊಂದಿದವರು)
ಉತ್ತರಿಸಬೇಕಾದ ದಿನಾಂಕ : 17.02.2022
ಉತ್ತರಿಸುವ ಸಚಿವರು : ಗೃಹ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
(ಅ)	ಬೆಂಗಳೂರು ನಗರದಲ್ಲಿ ವಾಹನಗಳ ಟೋಯಿಂಗ್‌ಗೆ ಇರುವ ನಿಯಮಗಳೇನು ;	ಬೆಂಗಳೂರು ನಗರದಲ್ಲಿ ವಾಹನಗಳು/ಪಾದಚಾರಿಗಳ ಸುಗಮ ಸಂಚಾರಕ್ಕೆ ಅಡಚಣೆಯಾಗುವಂತೆ (ಪ್ರದೇಶಗಳ ಪ್ರವೇಶಕ್ಕೆ ಅಡ್ಡಿ, ವಾಹನ ನಿಲುಗಡೆ ನಿಷೇಧ ಪ್ರದೇಶಗಳಲ್ಲಿ ನಿಲುಗಡೆ, ತಪ್ಪು ನಿಲುಗಡೆ, ಪಾದಚಾರಿ ದಾಟುವಿಕೆ, ಪಾದಚಾರಿ ರಸ್ತೆಯಲ್ಲಿ ನಿಲುಗಡೆ ಹಾಗೂ ಡಬಲ್ ಪಾರ್ಕಿಂಗ್ ಇತ್ಯಾದಿ) ಸಂಚಾರ ನಿಲುಗಡೆ ನಿಯಮಗಳನ್ನು ಉಲ್ಲಂಘಿಸುವ ವಿವಿಧ ರೀತಿಯ ವಾಹನಗಳನ್ನು ಸಾಗಿಸಲು ಹುಕ್ ಮತ್ತು ಚೈನ್ ವಿಧಾನ ಅಥವಾ ಚಕ್ರಗಳಿಂದ ಎತ್ತುವ ವಿಧಾನವನ್ನು ಒಳಗೊಂಡ ಟೋಯಿಂಗ್ ವಾಹನಗಳನ್ನು ಉಪಯೋಗಿಸಲಾಗುತ್ತಿದೆ. **<u>ವಾಹನಗಳನ್ನು ಎಳೆದೊಯ್ಯಲು ಇರುವ ಕಾನೂನು ನಿಯಮಗಳು:</u>** ಸಂಬಂಧಿಸಿದ ಕಲಂ: ಭಾರತೀಯ ಮೋಟಾರ್ ವಾಹನ ಕಾಯ್ದೆ ಕಲಂ 122. **<u>ಕಲಂ 122: ಅಪಾಯಕಾರಿ ರೀತಿಯಲ್ಲಿ ವಾಹನವನ್ನು ನಿಲ್ಲಿಸುವುದು:</u>** ರಸ್ತೆಯ ಇತರೆ ಬಳಕೆದಾರರಿಗೆ ಅಪಾಯ, ಅಡಚಣೆ ಅಥವಾ ಅನಗತ್ಯ ಅನಾನುಕೂಲತೆ ಉಂಟು ಮಾಡುವ ಹಾಗೂ ಅಂತಹ ಸಾಧ್ಯತೆಯಿರುವ ರೀತಿಯಲ್ಲಿ ಯಾವುದೇ ಸಾರ್ವಜನಿಕ ಸ್ಥಳದಲ್ಲಿ ವಾಹನವನ್ನು ನಿಲ್ಲಿಸಿ ಹೋಗುವುದು ಅಪರಾಧ. ಅಂತಹ ವಾಹನಗಳನ್ನು ಪೊಲೀಸರು ಎಳೆದೊಯ್ಯಬಹುದು ಮತ್ತು ಹೀಗೆ ಎಳೆಯುವುದಕ್ಕೆ ತಗಲುವ ಶುಲ್ಕವನ್ನು ಹಾಗೂ ಆತನ ಅಪರಾಧಕ್ಕೆ ಶುಲ್ಕವನ್ನು ವಿಧಿಸಬಹುದು. **<u>ಕಲಂ 127: ಸಾರ್ವಜನಿಕ ಸ್ಥಳದಲ್ಲಿ ಪರಿತ್ಯಕ್ತವಾಗಿ ಅಥವಾ ಉಪೇಕ್ಷಿತವಾಗಿ ಬಿಟ್ಟಿರುವ ಮೋಟಾರ್ ವಾಹನಗಳನ್ನು ತೆಗೆಯುವುದು.</u>** (1) ವಾಹನವನ್ನು ಸಾರ್ವಜನಿಕ ಸ್ಥಳದಲ್ಲಿ 10 ಗಂಟೆಗಳಿಗೂ ಹೆಚ್ಚು ಕಾಲ ಹಾಗೇ ಬಿಟ್ಟು ಹೋಗಿದ್ದರೆ ಅಥವಾ ನಿಲುಗಡೆ ಮಾಡಬಾರದು ಎಂದಿದ್ದ ಸ್ಥಳದಲ್ಲಿ ನಿಲ್ಲಿಸಿದ್ದರೆ ಸಮವಸ್ತ್ರದಲ್ಲಿರುವ ಆ ಪ್ರದೇಶದ ಪೊಲೀಸ್ ಅಧಿಕಾರಿಯು ಅದನ್ನು ಎಳೆದೊಯ್ಯುವಂತೆ ಆಜ್ಞೆ

		ಮಾಡಬಹುದು. 2) ಸಂಚಾರಕ್ಕೆ ಅಡಚಣೆ ಉಂಟು ಮಾಡುವ ರೀತಿಯಲ್ಲಿ ವಾಹನವನ್ನು ಹಾಗೆಯೇ ಬಿಟ್ಟು ಹೋಗಿದ್ದರೆ ಆ ಪ್ರದೇಶದ ಪೊಲೀಸ್ ಅಧಿಕಾರಿಯ ಆಜ್ಞೆಯ ಮೇರಗೆ ತಕ್ಷಣವೇ ಅದನ್ನು ಎಳೆದೊಯ್ಯುವ ಮೂಲಕ ಅಲ್ಲಿಂದ ತೆಗೆಯಬಹುದು. 3) ಎಳೆದೊಯ್ಯುವುದಕ್ಕೆ ತಗಲಿದ ಖರ್ಚನ್ನು ಮಾಲೀಕನು ತೆರಬೇಕು. ಇನ್ನಾವುದಾದರೂ ದಂಡ ವಿಧಿಸಿದ್ದರೆ ಅದನ್ನೂ ತೆರಬೇಕು.
(ಆ)	ಟೋಯಿಂಗ್ ಮಾಡಲು ಇರುವ ವಾಹನಗಳ ಸಂಖ್ಯೆ ಎಷ್ಟು; ಇವುಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳು ಯಾರು ;	ಬೆಂಗಳೂರು ನಗರದಲ್ಲಿ ಒಟ್ಟು 97 ಖಾಸಗಿ ಟೋಯಿಂಗ್ ವಾಹನಗಳು ಕಾರ್ಯ ನಿರ್ವಹಿಸುತ್ತಿವೆ. ಟೆಂಡರ್‌ನಲ್ಲಿನ ಕರಾರಿನಂತೆ ಈ ಎಲ್ಲಾ ಟೋಯಿಂಗ್ ವಾಹನಗಳಲ್ಲಿ ಖಾಸಗಿ ಟೋಯಿಂಗ್ ವಾಹನ ಮಾಲೀಕರೇ ನೇಮಿಸಲ್ಪಟ್ಟ ಸಿಬ್ಬಂದಿಗಳು ಕಾರ್ಯ ನಿರ್ವಹಿಸುತ್ತಾರೆ.
(ಇ)	ಟೋಯಿಂಗ್ ಮಾಡಿದ ವಾಹನದಿಂದ ಪಡೆಯುತ್ತಿರುವ ಶುಲ್ಕ ಎಷ್ಟು; (ಯಾವ ಯಾವ ವಾಹನಕ್ಕೆ ಎಷ್ಟು ಹಣ ಪಡೆಯಲಾಗುತ್ತಿದೆ); ಇದರಿಂದ ಸರ್ಕಾರಕ್ಕೆ ಬರುತ್ತಿರುವ ಹಣ ಎಷ್ಟು; ಹಾಗೂ ಏಜೆನ್ಸಿಗಳಿಗೆ ನೀಡುತ್ತಿರುವ ಹಣ ಎಷ್ಟು ?	ಸರ್ಕಾರದ ಅಧಿಸೂಚನೆ ಸಂಖ್ಯೆ:ಹೆಚ್.ಡಿ/330/ಎಸ್.ಎಸ್.ಟಿ/2016, ದಿನಾಂಕ:20.09.2016 ರಲ್ಲಿ ಬೆಂಗಳೂರು ನಗರಕ್ಕೆ ಖಾಸಗಿ ಟೋಯಿಂಗ್ ವ್ಯವಸ್ಥೆಯನ್ನು ಮಂಜೂರು ನೀಡಿದ್ದು, ಟೋ ಮಾಡಲಾದ ವಾಹನದ ಚಾಲಕ/ಮಾಲೀಕರಿಂದ ವಾಹನಗಳ ವಿಧದ ಆಧಾರದ ಮೇರೆಗೆ (Type of vehicles) ವಸೂಲಾತಿ ಮಾಡಬೇಕಾದ ದಂಡ ಮೊತ್ತದ ದರವನ್ನು ಮತ್ತು ಖಾಸಗಿ ಟೋ ವಾಹನಗಳ ಮಾಲೀಕರಿಗೆ ಪಾವತಿಸಬೇಕಾದ ದರಗಳನ್ನು ನಿಗದಿಪಡಿಸಿ ಅಧಿಸೂಚನೆಯನ್ನು ಹೊರಡಿಸಿದ್ದು, <u>ಅನುಬಂಧ</u> ಲಗತ್ತಿಸಲಾಗಿದೆ.

ಹೆಚ್‌ಡಿ 41 ಎಸ್‌ಎಸ್‌ಟಿ 2022

(ಆರಗ ಜ್ಞಾನೇಂದ್ರ)
ಗೃಹ ಸಚಿವರು

ಅನುಬಂಧ-1 (2

2013 12:11PM FAX 22254451 HD 0001

ಕರ್ನಾಟಕ ಸರ್ಕಾರ

ಸಂಖ್ಯೆ:ಹೆಚ್‌ಡಿ 330 ಎಸ್‌ಎಸ್‌ಟಿ 2016

ಕರ್ನಾಟಕ ಸರ್ಕಾರ ಸಚಿವಾಲಯ
ವಿಧಾನ ಸೌಧ
ಬೆಂಗಳೂರು, ದಿನಾಂಕ:20.09.2016

ಅಧಿಸೂಚನೆ

ಬೆಂಗಳೂರು ನಗರ ಸಂಚಾರ ವಿಭಾಗದ ವ್ಯಾಪ್ತಿಯ ರಸ್ತೆಗಳಲ್ಲಿ ಅಸ್ತವ್ಯಸ್ತ ಹಾಗೂ ಅಸಮರ್ಪಕವಾಗಿ, ನಿಷೇಧಿತ/ನಿರ್ಬಂಧಿತ ಸ್ಥಳಗಳಲ್ಲಿ ನಿಲ್ಲಿಸುವ ಹಾಗೂ ಸುಗಮ ಸಂಚಾರ ವ್ಯವಸ್ಥೆಗೆ ಅಡಚಣೆಯನ್ನುಂಟು ಮಾಡುವಂತಹ ವಾಹನಗಳನ್ನು ಟೋ ಮಾಡಲು ನಗರ ಸಂಚಾರ ಪೊಲೀಸ್ ವತಿಯಿಂದ ವಾಹನ ಚಾಲಕ/ಮಾಲೀಕರಿಂದ ಟೋಯಿಂಗ್ ಶುಲ್ಕ ಸೇರಿ ದಂಡ ವಸೂಲು ಮಾಡಲಾಗುತ್ತದೆ. ಈ ರೀತಿ ಟೋಯಿಂಗ್ ಮಾಡಲು ಖಾಸಗಿ ಟೋಯಿಂಗ್ ವಾಹನಗಳನ್ನು ಬಾಡಿಗೆ ಆಧಾರದಲ್ಲಿ ಪಡೆದು ನಿರ್ವಹಿಸಲಾಗುತ್ತಿದ್ದು, ಟೋ ಮಾಡಲಾಗುವ ವಾಹನಗಳ ಮಾಲೀಕರಿಗೆ ಪಾವತಿಸಬೇಕಾದ ಬಾಡಿಗೆ ಮೊತ್ತಕ್ಕೆ ಸಂಬಂಧಿಸಿದಂತೆ ದರಗಳನ್ನು ಸರ್ಕಾರದ ಅಧಿಸೂಚನೆ ಸಂಖ್ಯೆ: ಹೆಚ್‌ಡಿ 63 ಎಸ್‌ಎಸ್‌ಟಿ 2007, ದಿನಾಂಕ:19.05.2008ರಲ್ಲಿ ನಿಗಧಿಪಡಿಸಿದೆ.

ಬೆಂಗಳೂರು ನಗರಕ್ಕೆ ಅನ್ವಯವಾಗುವಂತೆ ಪ್ರಸ್ತುತ ಇರುವ ದರಗಳನ್ನು, ಟೋಯಿಂಗ್ ಮಾಡುವ ವಾಹನಗಳ ಬಾಡಿಗೆ ದರದ ಏರಿಕೆಯ ಕಾರಣಗಳಿಂದ ಪರಿಷ್ಕರಿಸಬೇಕಾಗಿರುವುದರಿಂದ, ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ದರ್ಜೆಯ ಅಥವಾ ಅದಕ್ಕಿಂತ ಹೆಚ್ಚಿನ ದರ್ಜೆಯ ಅಧಿಕಾರಿಗಳು ವಾಹನಗಳನ್ನು ಟೋ ಮಾಡಿಸಲು ಹಾಗೂ ವಾಹನ ಚಾಲಕರಿಗೆ/ಮಾಲೀಕರಿಗೆ ಟೋಯಿಂಗ್ ಶುಲ್ಕವನ್ನು ವಿಧಿಸಲು 1963ರ ಕರ್ನಾಟಕ ಮೋಟಾರು ವಾಹನಗಳ ನಿಯಮ 325 ಉಪನಿಯಮ (3)ರಲ್ಲಿ ಸರ್ಕಾರಕ್ಕೆ ಪ್ರದತ್ತವಾಗಿರುವ ಅಧಿಕಾರದನ್ವಯ ಈ ಕೆಳಕಂಡಂತೆ ಪರಿಷ್ಕರಿಸಿ ನಿಗಧಿಪಡಿಸಿದೆ.

ಕ್ರ ಸಂ	ವಾಹನಗಳ ವಿಧ	ಹಿಂದಿನ ಅಧಿಸೂಚನೆಯನ್ವಯ ಇರುವ ದರಗಳು		ಪರಿಷ್ಕೃತ ದರಗಳು	
		ಟೋ ಮಾಡಲಾದ ವಾಹನಗಳ ಮಾಲೀಕರಿಂದ ವಸೂಲು ಮಾಡಲಾದ ದರ	ಖಾಸಗಿ ಟೋ ವಾಹನಗಳ ಮಾಲೀಕರಿಗೆ ಪಾವತಿಸಬೇಕಾದ ದರ	ಟೋ ಮಾಡಲಾದ ವಾಹನಗಳ ಮಾಲೀಕರಿಂದ ವಸೂಲು ಮಾಡಲಾದ ದರ	ಖಾಸಗಿ ಟೋ ವಾಹನಗಳ ಮಾಲೀಕರಿಗೆ ಪಾವತಿಸಬೇಕಾದ ದರ
1	ಭಾರಿ ಸಾಗಣೆ ವಾಹನಗಳು	500-00	200-00	1500-00	750-00
2	ಮಧ್ಯಮ ಸಾಗಣೆ ವಾಹನಗಳು	400-00	175-00	1250-00	625-00
3	ಲಘು ವಾಹನಗಳು (ಕಾರುಗಳು, ಮೂರು ಚಕ್ರ ವಾಹನಗಳು, ಟೆಂಪೋಗಳು ಮತ್ತು ಆಟೋ ರಿಕ್ಷಾಗಳು)	300-00	150-00	1000-00	500-00
4	ದ್ವಿಚಕ್ರ ವಾಹನಗಳು	200-00	100-00	650-00	325-00

ಇದರೊಂದಿಗೆ ಸಂಚಾರ ನಿಯಮ ಉಲ್ಲಂಘನೆಯ ಆಧಾರದ ಮೇಲೆ ಸಂಬಂಧಿಸಿದ ಪರಿಮಿತಿಯಲ್ಲಿರುವ ನ್ಯಾಯಾಲಯಗಳು ಕರ್ನಾಟಕ ಮೋಟಾರು ವಾಹನಗಳ ಅಧಿನಿಯಮದನ್ವಯ ದಂಡವನ್ನು ವಿಧಿಸಿದಲ್ಲಿ, ಆ ದಂಡವನ್ನೂ ಸಹ ವಾಹನ ಚಾಲಕರು/ಮಾಲೀಕರು ಪಾವತಿಸುವುದು.

ಕರ್ನಾಟಕ ರಾಜ್ಯಪಾಲರ ಆದೇಶದನ್ವಯ
ಮತ್ತು ಅವರ ಹೆಸರಿನಲ್ಲಿ.

(ಕೆ.ಪದ್ಮನಿದೇವ)
ಸರ್ಕಾರದ ಅಧೀನ ಕಾರ್ಯದರ್ಶಿ,
ಒಳಾಡಳಿತ ಇಲಾಖೆ(ಕಾನೂನು ಮತ್ತು ಸುವ್ಯವಸ್ಥೆ)
ದೂ:080-22033326,e-mail:uslo-home@karnataka.gov.in

ಇವರಿಗೆ:
ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು ಮುಂದಿನ ವಿಶೇಷ ರಾಜ್ಯಪತ್ರದಲ್ಲಿ ಪ್ರಕಟಿಸಿ, ಒಳಾಡಳಿತ ಇಲಾಖೆ, ಕಾನೂನು & ಸುವ್ಯವಸ್ಥೆ-ಎ ಶಾಖೆಗೆ 25 ಪ್ರತಿಗಳನ್ನು ಒದಗಿಸುವಂತೆ ಕೋರಿದೆ.

ಪ್ರತಿ:

1) ಮಹಾಲೇಖಪಾಲರು, (ಎ ಮತ್ತು ಇ), ಕರ್ನಾಟಕ, ಬೆಂಗಳೂರು.
2) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು.
3) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಒಳಾಡಳಿತ ಇಲಾಖೆ, ವಿಧಾನ ಸೌಧ, ಬೆಂಗಳೂರು.
4) ಸರ್ಕಾರದ ಪ್ರಧಾನ ಕಾರ್ಯದರ್ಶಿ(ಪಿಸಿಎಎಸ್), ಒಳಾಡಳಿತ ಇಲಾಖೆ, ವಿಧಾನ ಸೌಧ, ಬೆಂಗಳೂರು.
5) ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಾರಿಗೆ ಇಲಾಖೆ, ಬಹು ಮಹಡಿಗಳ ಕಟ್ಟಡ, ಬೆಂಗಳೂರು.
6) ಮಹಾನಿರ್ದೇಶಕರು ಮತ್ತು ಆರಕ್ಷಕ ಮಹಾನಿರೀಕ್ಷಕರು, ನೃಪತುಂಗ ರಸ್ತೆ, ಬೆಂಗಳೂರು.
7) ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು, ಕಾನೂನು ಮತ್ತು ಸುವ್ಯವಸ್ಥೆ, ಬೆಂಗಳೂರು.
8) ಪೊಲೀಸ್ ಮಹಾನಿರೀಕ್ಷಕರು ಮತ್ತು ಆಯುಕ್ತರು, ಸಂಚಾರ ಮತ್ತು ರಸ್ತೆ ಸುರಕ್ಷತೆ, ಬೆಂಗಳೂರು.
9) ಪೊಲೀಸ್ ಆಯುಕ್ತರು, ಬೆಂಗಳೂರು ನಗರ, ಬೆಂಗಳೂರು.
10) ಉಪಾಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ ನಿಯಮಿತ ಬೆಂಗಳೂರು.
11) ಆಯುಕ್ತರು, ಸಾರಿಗೆ ಮತ್ತು ರಸ್ತೆ ಸುರಕ್ಷತೆ, ಟಿಟಿಎಂಸಿ, 'ಎ' ಬ್ಲಾಕ್, 1ನೇ ಮಹಡಿ ಶಾಂತಿ ನಗರ, ಬೆಂಗಳೂರು.
12) ಹೆಚ್ಚುವರಿ ಪೊಲೀಸ್ ಆಯುಕ್ತರು, ಸಂಚಾರ ಮತ್ತು ಭದ್ರತೆ, ಬೆಂಗಳೂರು
13) ಸರ್ಕಾರದ ಉಪ ಕಾರ್ಯದರ್ಶಿ(ಕಾನೂನು & ಸುವ್ಯವಸ್ಥೆ) ರವರ ಆಪ್ತ ಸಹಾಯಕರು, ಒಳಾಡಳಿತ ಇಲಾಖೆ, ವಿಧಾನ ಸೌಧ.
14) ಒಡಿಜಿಸಿ/ಶಾಖಾ ರಕ್ಷ ಕಡತ, ಹೆಚ್ಚುವರಿ ಪ್ರತಿ.